**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ**

**ಓ.ಎಸ್. ಸಂಖ್ಯೆ402/2013**

ದಿನಾಂಕ **01.08.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ-1

ಮುಂದುವರೆದ ಪಾಟೀ ಸವಾಲುಃ 6 ನೇ ಪ್ರತಿವಾದಿಯ ಪರ ಶ್ರೀ.ಆರ್.ವಿ ವಕೀಲರಿಂದಃ

11. ನಾನು ಬಿ ಎಸ್ಸಿ ಅರ್ಧಕ್ಕೆ ನಿಲ್ಲಿಸಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಚೆನ್ನಾಗಿ ಬರುತ್ತದೆ. ನಾನು ದಾವೆಯನ್ನು ಯಾರ ವಿರುದ್ದ ಸಲ್ಲಿಸಿದ್ದೇನೆ ಎಂದು ಅವರ ಹೆಸರು ಹೇಳಲು ಬರುತ್ತದೆ. ನಾನು ಯಾವ ಸ್ವತ್ತುಗಳ ಮೇಲೆ ದಾವೆ ಸಲ್ಲಿಸಿದ್ದೇನೆ ಎಂದು ಹೇಳಲು ಬರುತ್ತದೆ. ದಾವಾ ಸ್ವತ್ತುಗಳ ಎಲ್ಲಾ ಸರ್ವೆ ನಂಬರ್ ಗಳ ಚೆಕ್ಕುಬಂದಿಯನ್ನು ಹೇಳಲು ನನಗೆ ಆಗುವುದಿಲ್ಲ, ಆದರೆ ದಾಖಲೆ ನೋಡಿ ಹೇಳಬಹುದು. ನನಗೆ ಟ್ರಾಕ್ಟರ್, ಎತ್ತಿನ ಗಾಡಿ, ದನ ಕರುಗಳು ಇವೆ ಎಂದರೆ ಟ್ರಾಕ್ಟರ್ ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಸೈಟ್ ಗಳು ಮತ್ತು ಮನೆ ಗಳು ಇವೆ ಎಂದರೆ ಸರಿ. ಸದರಿ ಮನೆಗಳನ್ನು ಸೈಟ್ ಗಳನ್ನು ಈ ದಾವಾದಲ್ಲಿ ಸೇರಿಸಿಲ್ಲ ಎಂದರೆ, ಸೇರಿಸಿದ್ದೇನೆ.

12. ಎ ಅನುಸೂಚಿ ಸ್ವತ್ತಿನ ಐಟಂ ನಂ.4 ರಲ್ಲಿ ಸ.ನಂ.103 ಗೌಡೇಟಿ ಗ್ರಾಮಕ್ಕೆ ಸೇರಿದ ಒಟ್ಟು 15 ಎಕರೆ 4 ಗುಂಟೆ ಜಾಗದಲ್ಲಿ ಖರಾಬು ಸೇರಿ ಜಮೀನು ಎಂದರೆ ಸರಿ. ಸ.ನಂ.103 ಮೊದಲಿಗೆ ನಂಜಮ್ಮ ಕೋಂ ಆಂಜಿನರೆಡ್ಡಿಗೆ ಸೇರಿದ್ದು ಎಂದರೆ ಸರಿ. ಸದರಿ ನಂಜಮ್ಮನ ಕಡೆಯಿಂದ ನನ್ನ ತಂದೆ ಪ್ರತಿವಾದಿ 1 ರವರು ದಿ.04.05.1994 ರಂದು ಕ್ರಯದ ಕರಾರು ಪತ್ರ ಮೂಲಕ ಬರೆಸಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಂದೆ ಇದೇ ನ್ಯಾಯಾಲಯದಲ್ಲಿ ಸದರಿ ಕ್ರಯದ ಕರಾರು ಪತ್ರವನ್ನು ಕ್ರಯ ಪತ್ರ ಮಾಡಿಸಿಕೊಳ್ಳಲು ಒ ಎಸ್ 498/1994 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ರಾಜಿ ಮೂಲಕ ಕೊನೆಗೊಂಡಿದೆ ಎಂದರೆ ಸರಿ. ಸದರಿ ಡಿಕ್ರಿಯಂತೆ ನನ್ನ ತಂದೆ ಹೆಸರಿಗೆ ಖಾತೆ ಪಣಹಿ ಆಗಿ ಎಂ.ಆರ್.ನಂ.30/1994-95 ರಂತೆ ಮುಟೇಶನ್ ಆಗಿದೆ ಎಂದರೆ ಸರಿ.

13. ಐಟಂ ನಂ.4 ರ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸುಳ್ಳು. ನನ್ನ ತಂದೆ ನಂಜಮ್ಮನಿಂದ ಕ್ರಯಕ್ಕೆ ಪಡೆದ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಿ.20.12.2006 ರಂದು ಸೆಂಥಿಲ್ ರವರಿಗೆ ಸ.ನಂ.60/2 ಡಿ, ಸ.ನಂ.87/2 ಆಸ್ತಿಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ನಾನು ಪಡೆದುಕೊಂಡಿದ್ದೇನೆ ಎಂದರೆ ಸುಳ್ಳು. ಸಾಕ್ಷಿಗೆ ಒಂದು ಕ್ರಯ ಪತ್ರವನ್ನು ತೋರಿಸಲಾಯಿತು. ಸಾಕ್ಷಿ ಅದರಲ್ಲಿರುವ ಸಹಿ ನನ್ನದಲ್ಲ ಎಂದು ನುಡಿದಿರುತ್ತಾರೆ. ಸ.ನಂ.60/2 ಡಿ, ಸ.ನಂ.87/2 ರಲ್ಲಿರುವ ನನಗೆ ಸೇರಿದ ಭಾಗಾಂಶವನ್ನು ನಾನು ಸಂಥಿಲ್ 5 ನೇ ಪ್ರತಿವಾದಿಗೆ ಮಾರಾಟ ಮಾಡಿದಾಗ್ಯೂ ನಾನು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ನಾನು ಮತ್ತು ನನ್ನ ತಮ್ಮಂದಿರು ಮತ್ತು ನನ್ನ ತಂದೆ ಪ್ರತಿವಾದಿ 5 ರವರಿಗೆ ಆದ ಕ್ರಯ ಪತ್ರಕ್ಕೆ ಒಪ್ಪಿಗೆ ಸಾಕ್ಷಿಗಳಾಗಿ ಸಹಿ ಮಾಡಿದ್ದೇವೆ ಎಂದರೆ ಸಾಕ್ಷಿ ನಾನು ಸಹಿ ಮಾಡಿಲ್ಲ ನಮ್ಮ ಮನೆಯ ಹೆಣ್ಣು ಮಕ್ಕಳು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ದಿ.20.12.2006 ರಂದು 5 ನೇ ಪ್ರತಿವಾದಿಯಿಂದ ಹಣ ಪಡೆದು, ದಾವಾ ಐಟಂ ನಂ.4 ಕ್ಕೆ ಸಂಬಂಧಪಟ್ಟಂತೆ ನನ್ನ ತಂದೆ 1 ನೇ ಪ್ರತಿವಾದಿಗೆ ಮತ್ತು ಸಹೋದರರಾದ ಪ್ರತಿವಾದಿ 2 ಮತ್ತು 3 ರವರಿಗೆ ಅದೇ ದಿನ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ ನಾನು ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟದಾಗ್ಯೂ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ನನ್ನ ತಂದೆ ಅನುಸೂಚಿ ಎ ಸ್ವತ್ತಿನ ಐಟಂ ನಂ.4 ರ ಮೇಲೆ ದೊಮ್ಮತಮರಿ ಕರ್ನಾಟಕ ಬ್ಯಾಂಕ್ ನಲ್ಲಿ ರೂ.1,00,000/- ಹಣವನ್ನು ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ದಿ.17.05.2012 ರಂದು 6 ನೇ ಪ್ರತಿವಾದಿ ಸಾಲ ತೀರಿಸಿ ಸಾಲದ ರದ್ದಿಯಾತಿ ಪತ್ರವನ್ನು ನನ್ನ ತಂದೆಯಿಂದ ಪಡೆದಿದ್ದಾರೆ ಎಂದರೆ ಸುಳ್ಳು. ಸ.ನಂ.103 ಗೌಡೇಟಿ ಗ್ರಾಮದ 15 ಎಕರೆ 4 ಗುಂಟೆ ಜಾಗವನ್ನು 6 ನೇ ಪ್ರತಿವಾದಿಗೆ ನನ್ನ ತಂದೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲದೆ ನನ್ನ ತಂದೆ ಮಾರಿಕೊಂಡಿದ್ದಾರೆ. ಮಾರಾಟ ಮಾಡಿದ ವಿಚಾರ ನನಗೆ ತಿಳಿದು ಅಂದರೆ ಮರು ದಿನ ದಿ.25.05.2012 ರಂದು ನನ್ನ ತಂದೆ ಕ್ರಯಕ್ಕೆ ಕೊಟ್ಟ ಜಾಗಕ್ಕೆ ಸಂಬಂಧಿಸಿದ ಒಪ್ಪಿಗೆ ಪತ್ರವನ್ನು ನಾನು6 ನೇ ಪ್ರತಿವಾದಿ ಹೆಸರಿಗೆ ಬರೆದುಕೊಟ್ಟಿದ್ದೇನೆ ಎಂದರೆ

ಸುಳ್ಳು. ಸ.ನಂ.103 ರ 15 ಎಕರೆ 4 ಗುಂಟೆ ಜಾಗಕ್ಕೆ 6 ನೇಪ್ರತಿವಾದಿ ಹೆಸರಿಗೆ ಕ್ರಯಪತ್ರದ ಆಧಾರದ ಮೇರೆಗೆ ಎಂ.ಆರ್.ನಂ.ಹೆಚ್.19/2011-12 ರಂತೆ ಖಾತೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲದ ಹಾಗೆ ಅವರ ಹೆಸರಿಗೆ ಮಾಡಿಸಿಕೊಂಡಿದ್ದಾರೆ. ಸ.ನಂ.103 ರ 15 ಎಕರೆ 4 ಗುಂಟೆ ಜಾಗ ಈಗ ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ನಾನು ನೋಡಿರುವುದಿಲ್ಲ. ನಾನು ಸ.ನಂ.103 ರ 15 ಎಕರೆ 4 ಗುಂಟೆ ಜಾಗ ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ತೋರಿಸಲು ಕಂದಾಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

16. ದಿ.09.06.2016 ರಂದು ನಾನು ಮತ್ತು ನನ್ನ ತಂದೆ ಮತ್ತು ಅಣ್ಣ-ತಮ್ಮಂದಿರು ಉಳಿದ ನಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಂತೆ ನನ್ನ ತಂದೆ ಗೆ ಒಂದು ಲಕ್ಷ ಹಣವನ್ನು ಕೊಟ್ಟಿದೇನೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಂತೆ ಗೌಡೇಟಿ ಸನಂ.47 ರಲ್ಲಿ 16  ಎಕರೆ 36 ಗುಂಟೆ ಪೈಕಿ ನನ್ನ ಭಾಗಕ್ಕೆ 8 ಎಕರೆ 18 ಗುಂಟೆ ಜಮೀನು ಬಂದಿದೆ ಎಂದರೆ ಸರಿಯಲ್ಲ. ಅದೇ ಸರ್ವೆ ನಂಬರ್ ನಲ್ಲಿ ನನ್ನ ತಮ್ಮ ಶ್ರೀನಿವಾಸ್ 2 ನೇ ಪ್ರತಿವಾದಿಗೆ 8 ಎಕರೆ 18 ಗುಂಟೆ ಬಂದಿದೆ ಎಂದರೆ ಸುಳ್ಳು. ನನ್ನ ಚಿಕ್ಕ ತಮ್ಮ 3 ನೇ ಪ್ರತಿವಾದಿಗೆ ಕನಕಾಪುರದ ಸ.ನಂ.27/2 ರಲ್ಲಿ 6 ಎಕರೆ ಗುಂಟೆ ಜಮೀನು ಮತ್ತು ಸ.ನಂ.27/4 ರಲ್ಲಿ 2 ಎಕರೆ 39 ಗುಂಟೆ ಜಮೀನು ಬಂದಿದೆ ಎಂದರೆ ಸರಿಯಲ್ಲ.

17. ದಿ.09.06.2016 ರಂದು ನಮ್ಮ ಮಧ್ಯೆ ಆದ ವಿಭಾಗ ಪತ್ರದಲ್ಲಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನನ್ನು ಮಾರಾಟ ಮಾಡಿದ್ದರಿಂದ ನಾವು ಹಂಚಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸ.ನಂ.60/2 ಡಿ ಮತ್ತು 87/2 ರ ಜಮೀನುಗಳನ್ನು ಮಾರಾಟ ಮಾಡಿ ಸೆಂಥಿಲ್ ರವರಿಂದ ನಾನು ಹಣ ಪಡೆದಿದ್ದರಿಂದ ಸದರಿ ಜಮೀನುಗಳನ್ನು ಸಹ ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ  ಸದರಿ ವಿಭಾಗ ಪತ್ರದಂತೆ ನಾವು ಜಮೀನನ್ನು ಹಂಚಿಕೊಂದಡಿದ್ದರು ಸಹ ನಾನು ಈಗ ಇಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೀನೆ ಎಂದರೆ ಸರಿಯಲ್ಲ. ಅನುಸೂಚಿ ಎ ಸ್ವತ್ತಿನ ಐಟಂ ನಂ.4 ರಲ್ಲಿ ಸ.ನಂ.103 ರ 15 ಎಕರೆ 4 ಗುಂಟೆ ಜಾಗದ ಪೈಕಿ 14 ಎಕರೆ 30 ಗುಂಟೆ ಜಮೀನನ್ನು 6 ನೇ ಪ್ರತಿವಾದಿ

ಕ್ರಯಕ್ಕೆ ಪಡೆದು ಅಂದಿನಿಂದ ಇಂದಿನವರೆಗೂ ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಮತ್ತು ಖಾತೆ ಪಹಣಿ ಅವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನಾನೇ ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ದಿ.27.10.2012 ರಲ್ಲಿ 6 ನೇ ಪ್ರತಿವಾದಿ ಕ್ರಯಕ್ಕೆ ಪಡೆದ ಸನಂ.103 ರಲ್ಲಿ ಎರಡು ಬೋರ್ ವೆಲ್ ಗಳನ್ನು ಕೊರೆಸಿರುತ್ತಾರೆ ಎಂದರೆ ಸಾಕ್ಷಿ ನಾವೇ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ.

18. 6 ನೇ ಪ್ರತಿವಾದಿ ದಿ.01.03.2013 ರಂದು ಮತ್ತು 23.09.2014 ರಂದು ತಹಶೀಲ್ದಾರ್ ರವರಿಂದ ಕೊಳವೆ ಬಾವಿ ತೊಡಿಸಿದ ಬಗ್ಗೆ ದೃಢೀಕರಣ ಪತ್ರ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿ.22.12.2014 ರಂದು 6 ನೇ ಪ್ರತಿವಾದಿ ಹೆಸರಿಗೆ ವಿದ್ಯುತ್ ಚ್ಛಕ್ತಿ ಸಂಪರ್ಕವನ್ನು ಅದರ ಸಂಖ್ಯೆ ಎಪಿಐಪಿ5565/17.11.2014 ಮತ್ತು ಎಪಿಐಪಿ5566/17.11.2014 ರಂತೆ ಸ.ನಂ.103 ರ ಜಾಗಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಜಮೀನಿನ ಸ್ವಾಧೀನದಲ್ಲಿ ಇರುವ ಕಾರಣವೆ ಬೋರ್ ವೆಲ್ ತೊಡಿಸಿ ವಿದ್ಯುತ್ ಸಂಪರ್ಕ ಪಡೆದಿದ್ದಾರೆ ಎಂದರೆ ಸರಿಯಲ್ಲ. ದಿ.26.10.2015 ಮತ್ತು 16.11.2015 ರಂದು 1200 ಮಾವಿನ ಸಸಿಗಳನ್ನು ಸದರಿ ಕ್ರಯಕ್ಕೆ ಪಡೆದ ಜಮೀನಿನಲ್ಲಿ 6 ನೇ ಪ್ರತಿವಾದಿ ಹಾಕಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಮಾವಿನ ಸಸಿಗಳನ್ನು ಹಾಕಿದ್ದೇನೆ ಎಂದು ನುಡಿಯುತ್ತಾರೆ ಹಾಗೂ ಮಾವಿನ ಸಸಿಗಳನ್ನು ಹಾಕಿದ ಬಗ್ಗೆ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಾವಿನ ಸಸಿಗಳಿಗೆ ನೀರು ಹರಿಸಲು ಜೈನ್ ಕಂಪನಿಯಿಂದ ಹನಿನೀರಾವರಿ ಉಪಕರಣಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಕ್ರಯಕ್ಕೆ ಪಡೆದ ಜಮೀನಲ್ಲಿ ನಾನು ಸ್ವಾಧಿನದಲ್ಲಿ ಇಲ್ಲ ಎಂದರೆ ಸರಿಯಲ್ಲ 6 ನೇ ಪ್ರತಿವಾದಿಯೇ ಸದರಿ ಜಮೀನಿನಲ್ಲಿ ಬರುವ ಪಸಲನ್ನು ಮಾರುಕಟ್ಟೆಗೆ ಹಾಕಿ ಮಾರಾಟ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

19. 6 ನೇ ಪ್ರತಿವಾದಿಗೆ ನಾನು ತೊಂದರೆ ಕೊಡುತ್ತಿದ್ದೇನೆ ಎಂದು ನನ್ನ ವಿರುದ್ಧ ಒ.ಎಸ್.75/2014 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವಾದಲ್ಲಿ ನಾನು 5 ನೇ

ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಪರವಾಗಿ ಯಜ್ಞ ನಾರಾಯಣ ಶರ್ಮ ವಕೀಲರನ್ನು ನೇಮಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಿಚಾರಣೆಯನ್ನು ಸಹ ನೀಡಿದ್ದೆ ಎಂದರೆ ಸರಿ. ದಿ.28.02.2022 ರಂದು ದಾವೆ 6 ನೇಪ್ರತಿವಾದಿಯ ಪರವಾಗಿ ತೀರ್ಪು ಆಗಿದೆ ಎಂದರೆ ಸರಿ, ನಾನು ಸದರಿ ತೀರ್ಪಿನ ಮೇಲೆ ಅಫೀಲು ಹೋಗಿದ್ದೇನೆ. ಸದರಿ ಅಪೀಲು ಸಂಖ್ಯೆ ಆರ್ ಎ ನಂ.13/2022 ಎಂದರೆ ಸರಿ. ದಿ.08.07.2025 ರಂದು ನಾನು ಸಲ್ಲಿಸಿದ ಅಪೀಲು ವಜಾ ಗೊಂಡಿದೆ ಎಂದರೆ ಸರಿ. ಆದರೆ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸದರಿ ತೀರ್ಪನ್ನು ಪ್ರಶ್ನೆ ಮಾಡಿ ಅಪೀಲು ಸಲ್ಲಿಸಿದ್ದೇನೆ. ಅದರ ಅಪೀಲು ಸಂಖ್ಯೆ ಇನ್ನು ಬಂದಿರುವುದಿಲ್ಲ. ದಾವಾ ಎ ಅನುಸೂಚಿ ಸ್ವತ್ತು ಐಟಂ ನಂ.4 ರ ಸ.ನಂ.103 6 ನೇ ಪ್ರತಿವಾದಿಯ ಆಸ್ತಿ ಹಾಗೂ ಅದರಲ್ಲಿ ಅವರೆ ಸ್ವಾಧೀನದಲ್ಲಿ ಇದ್ದರೂ ನಾನು ವಿನಾ ಕಾರಣ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>
(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ